Woman’s Counselling Cell



...ಸಲಾಗಿದೆ
...ದಿ:

...ವಿಶ್ವವಿದ್ಯಾಲಯ
...ಮಹಾವಿದ್ಯಾಲಯ ಆವರಣ
...ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ವಿಷಯ 06:** ಒಡನಾಡಿ ಸಂಸ್ಥೆಯಂತಹ ಸೇವಾಸಂಸ್ಥೆಗಳ ಅಭ್ಯರ್ಥಿಗಳಿಗೆ ಕಸಂವಿಯಲ್ಲಿ ಅಧ್ಯಯನ ಮಾಡಲು ವಿಶೇಷ ಮೀಸಲಾತಿ ನೀಡುವ ಬಗೆಗೆ

**ಟಿಪ್ಪಣಿ:** ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಒಡನಾಡಿ ಸಂಸ್ಥೆಯ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳ ಕುರಿತು ರಾಜ್ಯಮಟ್ಟದ ಕಾರ್ಯಾಗಾರವನ್ನು ದಿನಾಂಕ 31.05.2014ರಂದು ಮೈಸೂರಿನಲ್ಲಿ ಏರ್ಪಡಿಸಿತ್ತು. ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳನ್ನು ಕುರಿತು ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸವನ್ನು ಮಾಡಲು ತಮ್ಮ ಸಂಸ್ಥೆಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಮೀಸಲಾತಿ ನೀಡಬೇಕೆಂದು ಕೋರಿ ಅದಕ್ಕೆ ಸಂಬಂಧಿಸಿದ ಪತ್ರಿಕಾವರದಿಗಳನ್ನು ನೀಡಿರುವರು. ಈ ಸಂಬಂಧ ಸಭೆಯ ಅನುಮತಿಯನ್ನು ಕೋರಿದೆ.

**ನಿರ್ಣಯ:** **ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳು/ವಿದ್ಯಾರ್ಥಿಗಳು ಕಸಂವಿಗೆ ಸಂಬಂಧಿಸಿದ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ಅರ್ಜಿ ಸಲ್ಲಿಸಿ ಆಯ್ಕೆಯಾಗುವ ಸಂದರ್ಭದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬಹುದೆಂದು ಸಭೆಯು ತೀರ್ಮಾನಿಸಿತು.**

Shedhar M.K.
**ಕುಲಸಚಿವರು**

...ವಿಶ್ವವಿದ್ಯಾಲಯ
... 560018

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಆಡಳಿತ/ಕು.ಸ.ಕಾ./ಸಾ.ಪ/2015–16/819-1 ದಿನಾಂಕ: 04.07.2015

ಇವರಿಗೆ,
ಶ್ರೀ ಸ್ಟ್ಯಾನ್ಲಿ ಕೆ.ವಿ.
ಸಂಸ್ಥಾಪಕ ಕಾರ್ಯದರ್ಶಿಗಳು
ಒಡನಾಡಿ ಸೇವಾ ಸಂಸ್ಥೆ (ರಿ.)
# 15/2ಬಿ, ಎಸ್.ಆರ್.ಎಸ್. ಕಾಲೋನಿ
ಹೂಟಗಳ್ಳಿ ಗ್ರಾಮ, ಬೆಳವಾಡಿ ಅಂಚೆ
ಹುಣಸೂರು–ಮೈಸೂರು ರಸ್ತೆ, ಮೈಸೂರು – 570018.

ಮಾನ್ಯರೇ,

ವಿಷಯ: ಒಡನಾಡಿ ಸಂಸ್ಥೆಯ ಆಶ್ರಿತ ಮಕ್ಕಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಗೆ ವಿಶೇಷ ಮೀಸಲಾತಿ ಕಲ್ಪಿಸುವ ಬಗೆಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: 204/2015–16; ದಿನಾಂಕ: 20.06.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಒಡನಾಡಿ ಸಂಸ್ಥೆಯ ಆಶ್ರಿತ ಮಕ್ಕಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಗೆ ವಿಶೇಷ ಮೀಸಲಾತಿ ಕಲ್ಪಿಸಿರುವುದು ಸರಿಯಷ್ಟೆ. ವಿಶೇಷ ಮೀಸಲಾತಿ ಕಲ್ಪಿಸಿರುವುದಕ್ಕೆ ಸಂಬಂಧಿಸಿದಂತೆ ನಮ್ಮ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ನಿರ್ಣಯ ಹಾಗೂ ಸುತ್ತೋಲೆಯ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಕಳುಹಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ,
Srivana 4/7/15
ಕುಲಸಚಿವರು (ಪ್ರ)

ಮಹಾರಾಜ ಸಂಸ್ಕೃತ ಕಾಲೇಜು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಘಟಕ ಕಾಲೇಜು
ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-24.

ಎಂ.ಎಸ್.ಸಿ/ಸಿ01/ಮೀಸಲಾತಿ/15-16 ದಿನಾಂಕ: 11/08/2015

ಗೆ,

ಮಾನ್ಯ ಕುಲಸಚಿವರು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ,
ಬೆಂಗಳೂರು-18.

ಮಾನ್ಯರೇ,

ವಿಷಯ: ಸೇವಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿ ಪತ್ರ ಸಂಖ್ಯೆ: ಕಸಂವಿ/01/2014-15/ಶೈ.ಅ.ವಿ.ವಿ.ಕೋ.ಮೀ/822-10, ದಿನಾಂಕ: 04/07/2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ; ಉಲ್ಲೇಖದ ಪತ್ರದಲ್ಲಿ ಒಡನಾಡಿ ಸಂಸ್ಥೆಯಂತಹ ಸೇವಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಈ ಕಾಲೇಜಿನಲ್ಲಿ ಮೀಸಲಾತಿ ನೀಡುವುದನ್ನು ಜಾರಿಗೊಳಿಸಲು ಸೂಚಿಸಿದ್ದು, ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಕಳುಹಿಸಲು ತಿಳಿಸಿರುವುದು ಸರಿಯಷ್ಟೆ. 2015-16ನೇ ಸಾಲಿನಲ್ಲಿ ಅಂತಹ ಯಾವುದೇ ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಪ್ರವೇಶ ನೋಂದಣಿ ಪಡೆದಿರುವುದಿಲ್ಲವೆಂಬ ವಿಷಯವನ್ನು ಈ ಮೂಲಕ ತಮ್ಮ ಅವಗಾಹನೆಗೆ ತರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಂಶುಪಾಲರು
ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು,
ಮೈಸೂರು - 570 024

ಗೆ,
ವಿದ್ಯಾವಿಭಾಗ,
ನಾಗಪ್ಪ ... 
2/9/15

ದಿನಾಂಕ 1/9/15
ಸಂಖ್ಯೆ 2639

# ಒಡನಾಡಿ ಮಕ್ಕಳಿಗೆ ಸಂಸ್ಕೃತ ವಿವಿಯಲ್ಲೂ ಶೈಕ್ಷಣಿಕ ಮೀಸಲಾತಿ

ಮೈಸೂರು,ಜೂ.೨೪–ಲೈಂಗಿಕ ಶೋಷಣೆ ಹಾಗೂ ಮಾನವ ಸಾಗಾಣಿಕೆಗೆ ಒಳಪಟ್ಟ ಮಹಿಳೆಯರು ಮತ್ತು ಮಕ್ಕಳ ಸಬಲತೆಗಾಗಿ ಶ್ರಮಿಸುತ್ತಿರುವ ನಗರದ ಒಡನಾಡಿ ಸೇವಾ ಸಂಸ್ಥೆಯ ಮಕ್ಕಳ ಪ್ರವೇಶಾತಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ನೀಡಿರುವ ಮಾದರಿಯಲ್ಲಿಯೇ ಬೆಂಗಳೂರಿನಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವೂ ಪ್ರತ್ಯೇಕ ಶೈಕ್ಷಣಿಕ ಮೀಸಲಾತಿ ಕಲ್ಪಿಸಿದೆ.

ಯಾವುದೇ ಪ್ರಾಥಮಿಕ ಶಿಕ್ಷಣವಿಲ್ಲದೆ 'ಸೇತು ಬಂಧ'ದ ಮೂಲಕ ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಗೆ ಕಾಲಿಡುತ್ತಿರುವ ಈ ಮಕ್ಕಳು ಎಲ್ಲಾ ಸೌಲಭ್ಯಗಳೊಡನೆ ಬೆಳೆದು ಬರುವ ವಿದ್ಯಾರ್ಥಿ ಸಮುದಾಯದೊಂದಿಗೆ ಸ್ಪರ್ಧಿಸಲಾಗದೆ ಹಣಗಾಡುತ್ತಾರೆ. ಇಂತಹ ಮಕ್ಕಳಿಗೆ ಮಾನವೀಯ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯ ಈಗಾಗಲೇ ಶೈಕ್ಷಣಿಕ ಮೀಸಲಾತಿ ನೀಡಿ, ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಇದೇ ಮಾದರಿಯಲ್ಲಿ ರಾಜ್ಯದಲ್ಲಿರುವ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಶೈಕ್ಷಣಿಕ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸುವ ನಿಟ್ಟಿನಲ್ಲಿ ಕಳೆದ ವರ್ಷ ಮೇ ೩೧ರಂದು ಒಡನಾಡಿ ಸೇವಾ ಸಂಸ್ಥೆ, ಮಾನವ ಸಾಗಾಣಿಕೆ ವಿರೋಧಿ ಆಂದೋಲನ–ಕರ್ನಾಟಕ ಹಾಗೂ ಮೈಸೂರು ವಿವಿ ಸಹಭಾಗಿತ್ವದಲ್ಲಿ ಮಾನವ ಸಾಗಾಣಿಕೆಗೆ ಒಳಪಟ್ಟವರು, ದೇವದಾಸಿಯರು ಹಾಗೂ ಅವರ ಮಕ್ಕಳು, ಅತ್ಯಾಚಾರಕ್ಕೆ ಒಳಪಟ್ಟವರು, ವರದಕ್ಷಿಣೆ ಹಾಗೂ ಕೌಟುಂಬಿಕ ಪೀಡಣೆಗಳಿಂದ ನೊಂದವರು, ಆ್ಯಸಿಡ್ ದಾಳಿ ಹಾಗೂ ಭಾಗಶಃ ದಹಿಸಲ್ಪಟ್ಟವರು, ಲೈಂಗಿಕ ಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಗಾಗಿ ಕುಲಪತಿಗಳು, ಕುಲಸಚಿವರು ಹಾಗೂ ಸಮಾಜ ಚಿಂತಕರ ರಾಜ್ಯಮಟ್ಟದ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು ಭಾಗವಹಿಸಿ, ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಈ ಸಭೆಯ ಪರಿಣಾಮವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಒಡನಾಡಿ ಆಶ್ರಿತ ಮಕ್ಕಳ ಪ್ರವೇಶಾತಿಗಾಗಿ ಪ್ರತ್ಯೇಕ ಶೈಕ್ಷಣಿಕ ಮೀಸಲಾತಿ ಕಲ್ಪಿಸಿರುವುದು ಮಾನವೀಯ ಕಾಳಜಿಯ ದಿಟ್ಟ ಹೆಜ್ಜೆಯಾಗಿದೆ ಎಂದು ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ–ಪರಶು ತಿಳಿಸಿದ್ದಾರೆ.

ಧಾರವಾಡ ವಿಶ್ವವಿದ್ಯಾನಿಲಯ ಕೂಡ ಈ ವಿಚಾರವಾಗಿ ಧನಾತ್ಮಕವಾಗಿ ಪ್ರತಿಕ್ರಿಯಿಸಿದೆ. ಇದೇ ರೀತಿ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳೂ ಒಡನಾಡಿಯ ನ್ಯಾಯಯುತ ಬೇಡಿಕೆಗಳಿಗೆ ಧ್ವನಿಯಾದರೆ, ಅದೆಷ್ಟೋ ಶೋಷಣೆಗೆ ಬಲಿಯಾದ ಮಹಿಳೆಯರು ಮತ್ತು ಮಕ್ಕಳು ಸಾಮಾಜಿಕ ಬದಲಾವಣೆಯ ಹಾದಿಗೆ ಸೇರ್ಪಡೆಯಾಗಬಲ್ಲರು ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಕಸಂವಿ /01/ಮ.ದೌ.ತ.ಸ/ದೂ/2018–19 ದಿನಾಂಕ : 20–07–19

## ಮಹಿಳಾ ದೌರ್ಜನ್ಯ ತಡೆ ಸಮಿತಿಯ ಆಂತರಿಕ ವಿಚಾರಣಾ ಸಮಿತಿಯ ಸದಸ್ಯರ ಪಟ್ಟಿ

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01. | ಡಾ. ಅನುಪಮಾ<br>ಹಿರಿಯ ಸಹಾಯಕ ಪ್ರಾಧ್ಯಾಪಕರು. ಕ.ಸಂ.ವಿ. ಬೆಂಗಳೂರು. | ಅಧ್ಯಕ್ಷರು |
| 02. | ಶ್ರೀಮತಿ, ಸುಜಾತಾ ಗೌಡ<br>ಪ್ರಶಾಸನ ಸಮೀತಿಯ ಸದಸ್ಯರು. | ಸದಸ್ಯರು |
| 03. | ಡಾ.ಸಂಧ್ಯಾ ರೆಡ್ಡಿ<br>ಸರ್ಕಾರೇತರ ಸಂಸ್ಥೆ | ಸದಸ್ಯರು |
| 04. | ಭಾರತೀ ಸಿಂಗ್<br>ಮುದ್ರಾ ಫೌಂಡೇಷನ್ | ಸದಸ್ಯರು |
| 05. | ಜ್ಯೋತಿ ಹೆಚ್.ಪಿ<br>ಯೋಜನಾ ಸಹಾಯಕರು ಕ.ಸಂ.ವಿ. ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |
| 06. | ಉಮಾ ಟಿ.<br>'ಡಿ' ಗ್ರೂಪ್ ನೌಕರರು, ಕ.ಸಂ.ವಿ. ಬೆಂಗಳೂರು. | ಸದಸ್ಯರು |

ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

## ೦೮.೦೯.೨೦೧೫ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೮ನೇ ಸಭೆಯ ನಡಾವಳಿ

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 15 | **'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ಪುನಾರಚಿಸುವ ಬಗೆಗೆ.**<br>ಮಾನ್ಯ ಕುಲಾಧಿಪತಿಗಳು ಹಾಗೂ ಕರ್ನಾಟಕ ಸರ್ಕಾರದ ಮಹಿಳಾ ಆಯೋಗದ ಸೂಚನೆಯಂತೆ ವಿಶ್ವವಿದ್ಯಾಲಯದಲ್ಲಿ 'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ರಚಿಸಲಾಗಿತ್ತು. ಈ ಸಮಿತಿಯನ್ನು ಪುನಾರಚಿಸಿದ್ದು, ಕೆಳಕಂಡ ಸದಸ್ಯರನ್ನು ನೇಮಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>1. **ಡಾ. ವನಿತಾ ರಾಮಸ್ವಾಮಿ,** ಪ್ರಶಾಸನ ಸಮಿತಿ ಸದಸ್ಯರು – ಅಧ್ಯಕ್ಷರು<br>2. **ಡಾ. ಕೆ.ಆರ್. ಸಂಧ್ಯಾರೆಡ್ಡಿ,** ಸರ್ಕಾರೇತರ ಸಂಸ್ಥೆ – ಸದಸ್ಯರು<br>3. **ಶ್ರೀಮತಿ ಭಾರತೀ ಸಿಂಗ್,** ಸಂಸ್ಥಾಪಕರು, ಸಾ–ಮುದ್ರ ಫೌಂಡೇಶನ್ – ಸದಸ್ಯರು<br>4. **ಶ್ರೀಮತಿ ಪ್ರೀತಿ ಡಿ. ನಾಯಕ್,** ನ್ಯಾಯವಾದಿಗಳು – ಸದಸ್ಯರು<br>5. **ವಿದುಷಿ ಜ್ಯೋತಿ ಎಚ್.ಪಿ.,** ಯೋಜನಾ ಸಹಾಯಕರು – ಸದಸ್ಯರು<br>6. **ಶ್ರೀಮತಿ ಟಿ. ಉಮಾ,** ಗ್ರೂಪ್ ಡಿ ನೌಕರರು – ಸದಸ್ಯರು<br>7. **ವಿದುಷಿ ಅನುಪಮಾ ಬಿ.,** ಸಹಾಯಕ ಪ್ರಾಧ್ಯಾಪಕರು – ಸದಸ್ಯ ಕಾರ್ಯದರ್ಶಿ | 'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ಪುನಾರಚಿಸುವುದಕ್ಕೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು. |

Sudha. M.K.
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ವಿಷಯ:** **'Sensitization Prevention & Cell for Sexual Harrasement' ಸಮಿತಿಯನ್ನು ರಚಿಸುವ ಬಗೆಗೆ.**

ಉಲ್ಲೇಖ:
1. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಇಡಿ 66 ಯುಎನ್ಇ 2015; ದಿನಾಂಕ: 03.03.2015.
2. ಕರ್ನಾಟಕ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳ ಅರೆಸರ್ಕಾರಿ ಪತ್ರ ಸಂಖ್ಯೆ: ಜಿಎಸ್ 8 ಜಿಯುಎಂ 2015; ದಿನಾಂಕ: 05.05.2015.
3. ಮಾನ್ಯ ಕುಲಪತಿಗಳ ಅನುಮೋದನೆ; ಕಂಡಿಕೆ ಸಂಖ್ಯೆ: 17; ದಿನಾಂಕ: 03.06.2015
4. ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯ ನಿರ್ಣಯ.

**ಪ್ರಸ್ತಾವನೆ:**

ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಆವರಣದಲ್ಲಿ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರ ಸುರಕ್ಷತೆಯ ದೃಷ್ಟಿಯಿಂದ ಕರ್ನಾಟಕ ಉಚ್ಚ ನ್ಯಾಯಾಲಯದ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ, ದಿನಾಂಕ: 01.12.2014ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ 12ನೇ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡು ಅಗತ್ಯ ಕ್ರಮಗಳನ್ನು ವಹಿಸುವಂತೆ ಉಲ್ಲೇಖ 1ರ ಪತ್ರದಲ್ಲಿ ತಿಳಿಸಲಾಗಿತ್ತು. ಅಂತೆಯೇ, ಕರ್ನಾಟಕ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು ಬರೆದ ಉಲ್ಲೇಖ 2ರ ಪತ್ರದಲ್ಲಿ ವಿಶ್ವವಿದ್ಯಾಲಯದಲ್ಲಿ ಆದಷ್ಟೂ ಶೀಘ್ರವಾಗಿ 'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ರಚಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಉಲ್ಲೇಖ 3ರಲ್ಲಿ ಅನುಮೋದಿಸಿರುವಂತೆ, ಲೈಂಗಿಕ ದೌರ್ಜನ್ಯ ತಡೆ ಸಮಿತಿಯನ್ನು ರಚಿಸಲಾಗಿತ್ತು. ಉಲ್ಲೇಖ 4ರ ಪ್ರಶಾಸನ ಸಮಿತಿಯ ನಿರ್ಣಯದಂತೆ ಈ ಸಮಿತಿಯನ್ನು ಪುನಾರಚಿಸಿದ್ದು, ಕೆಳಕಂಡವರನ್ನು ಸದಸ್ಯರನ್ನಾಗಿ ನೇಮಿಸಿ ಈ ಆದೇಶವನ್ನು ಹೊರಡಿಸಿದೆ.

**ಆದೇಶ**

ಸಂಖ್ಯೆ: ಕಸಂವಿ/ಆಡಳಿತ/ಮ.ದೌ.ವಿ.ಸ./2015–16 ದಿನಾಂಕ: 30.10.2017

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **'Sensitization Prevention & Cell for Sexual Harrasement'** ಸಮಿತಿಗೆ ಕೆಳಕಂಡ ಸದಸ್ಯರನ್ನು ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶಿಸಿದೆ.

| | |
|---|---|
| 1. ಶ್ರೀಮತಿ ಸುಜಾತಾ ಗೌಡ, ಪ್ರಶಾಸನ ಸಮಿತಿ ಸದಸ್ಯರು | ಅಧ್ಯಕ್ಷರು |
| 2. ಡಾ. ಕೆ.ಆರ್. ಸಂಧ್ಯಾರೆಡ್ಡಿ, ಸರ್ಕಾರೇತರ ಸಂಸ್ಥೆ | ಸದಸ್ಯರು |
| 3. ಶ್ರೀಮತಿ ಭಾರತೀ ಸಿಂಗ್, ಸಂಸ್ಥಾಪಕರು, ಸಾ–ಮುದ್ರ ಫೌಂಡೇಶನ್ | ಸದಸ್ಯರು |
| 4. ಶ್ರೀಮತಿ ಪ್ರೀತಿ ಡಿ. ನಾಯಕ್, ನ್ಯಾಯವಾದಿಗಳು | ಸದಸ್ಯರು |
| 5. ವಿದುಷಿ ಜ್ಯೋತಿ ಎಚ್.ಪಿ., ಯೋಜನಾ ಸಹಾಯಕರು (ಶೈ) | ಸದಸ್ಯರು |
| 6. ಶ್ರೀಮತಿ ಟಿ. ಉಮಾ, ಗ್ರೂಪ್ ಡಿ ನೌಕರರು | ಸದಸ್ಯರು |
| 7. ವಿದುಷಿ ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ಸದಸ್ಯರನ್ನೊಳಗೊಂಡ ಸಮಿತಿಯು ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ನಡೆಸಿ, ಸೂಕ್ತ ಕ್ರಮವನ್ನು ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

**ಆದೇಶದ ಮೇರೆಗೆ,**

**ಕುಲಸಚಿವರು**

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–सङ्केत: – karnatakasanskrituniversity@gmail.com

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018

कर्नाटक–संस्कृत–विश्वविद्यालयः


ಕಸಂವಿ /01/ಮ.ದೌ.ತ.ಸ/ದೂ/2018-19

ದಿನಾಂಕ : 2[illegible]-07-19

## ಕಛೇರಿ ಆದೇಶ

**ವಿಷಯ:** ಮಹಿಳಾ ದೌರ್ಜನ್ಯ ತಡೆ ಸಮಿತಿಯ ಅಧ್ಯಕ್ಷರ ನೇಮಕಾತಿ ಮಾಡುವ ಬಗ್ಗೆ

**ಉಲ್ಲೇಖ:** ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 40 ದಿನಾಂಕ: 22.07.2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಮಾನ್ಯ ಕುಲಪತಿಗಳ ಒಪ್ಪಿಗೆಯಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಹಿಳಾ ದೌರ್ಜನ್ಯ ತಡೆ ಸಮಿತಿಯ ಅಧ್ಯಕ್ಷರ ಸ್ಥಾನಕ್ಕೆ ಡಾ. ಅನುಪಮಾ ಹಿರಿಯ ಸಹಾಯಕ ಪ್ರಾಧ್ಯಾಪಕರು. ಇವರನ್ನು ಹಾಗೂ ಸದಸ್ಯ ಕಾರ್ಯದರ್ಶಿಗಳಾಗಿ ಜ್ಯೋತಿ ಎಚ್.ಪಿ ಯೋಜನಾ ಸಹಾಯಕರು ಇವರನ್ನು ನಿಯೋಜಿಸಲಾಗಿದೆ.

(ಪ್ರ)ಕುಲಸಚಿವರು

ಇವರಿಗೆ,

1. ಡಾ. ಅನುಪಮಾ
   ಹಿರಿಯ ಸಹಾಯಕ ಪ್ರಾಧ್ಯಾಪಕರು.
   ಕ.ಸಂ.ವಿ. ಬೆಂಗಳೂರು.

2. ಜ್ಯೋತಿ ಹೆಚ್.ಪಿ
   ಯೋಜನಾ ಸಹಾಯಕರು
   ಕ.ಸಂ.ವಿ. ಬೆಂಗಳೂರು.

ಪ್ರತಿಗಳು:

ಕಛೇರಿ ಪ್ರತಿ

**7 - Institutional Values and Best Practices**

**7.1 Institutional Values and Social Responsibilities**

**7.1.2 Institution shows gender sensitivity in providing facilities such as:**

**1. Safety and Security**

**2. Counseling**

**3. Common Room**

**Link to KSU's Women Cell's initiative =**
**https://ksu.ac.in/wp-content/uploads/2023/04/7.1.2_women-cell.pdf**

**Link to Anti Women Harassment Cell =**
**https://ksu.ac.in/wp-content/uploads/2023/04/KSU_7.1.2_AntiWomenHarrasmentCell.pdf**

**Link to Photos For Women's Cell =**
**https://ksu.ac.in/wp-content/uploads/2023/04/7.1.2_woman-cell-photos.pdf**